ಬಿಕ್ಕಿ ಬಿಕ್ಕಿ ಅಳಹತ್ತಿದ್ದಳು.

'ಮೇಡಂ, ನನ್ನ ಮೈ ಮಲಿನವಾಗಿದೆ. ಆ ವ್ಯಕ್ತಿ, ಅಲ್ಲ, ರಾಕ್ಷಸ, ನನ್ನ ಎಲ್ಲಾ ಅಂಗಗಳನ್ನು ಮುಟ್ಟಿದ್ದಾನೆ. ಆ ಕಚಗುಳಿ ಇಡುವ ಆಟದಲ್ಲಿ ನನಗೆ, ನಾನೂ ಎಲ್ಲೋ ಸಂತಸಪಟ್ಟಿದ್ದೇನೋ ಎಂಬ ತಪ್ಪು ಭಾವನೆ ಕಾಡುತ್ತದೆ. ನಾನ್ಯಾಕೆ ಪ್ರತಿಭಟಿಸಲಿಲ್ಲ? ಆ ವಯಸ್ಸಿನಲ್ಲೇನೋ ತಿಳಿದಿರಲಿಲ್ಲ. ಹನ್ನೆರಡು ವರ್ಷಗಳಾದ ನಂತರ, ಅಮ್ಮನಿಗೆ ಹೇಳಿಕೊಳ್ಳುವುದಕ್ಕೆ ಹೋದರೆ 'ಹುಶ್.... ಹಾಗೆಲ್ಲಾ ಯಾರಿಗೂ ಹೇಳಬೇಡ, ಮರ್ಯಾದೆ ಹೋಗುತ್ತದೆ. ನಿನ್ನದೇ ಕಲ್ಪನೆ ಇರಬೇಕು; ಎಂದು ಅಮ್ಮ ತಳ್ಳಿಹಾಕಿದಳು. ಗಂಡಸರೆಂದರೇ ಭಯ ನನಗೆ ಭಯ ಎಂದು ಶಾಲಿನಿ ಮುಂದುವರೆಸಿದಾಗ ನನಗೆ ನೆನಪಾಗಿದ್ದು, ಕುವೆಂಪುರವರ ಶ್ರೀರಾಮಾಯಣ ದರ್ಶನಂ ಸಾಲುಗಳು. ರಾಮ ರಾವಣನನ್ನು ಕೊಂದು ಯುದ್ಧ ಗೆದ್ದಾಗ ಸೀತೆ ರಾಮನನ್ನು ಸೇರಲು ಬರುತ್ತಾಳೆ. ನಮಸ್ಕರಿಸಲು ಹೋದಾಗ ರಾಮ ಅವಳ ಚಾರಿತ್ರ್ಯದ ಬಗ್ಗೆ ಸಂದೇಹ ವ್ಯಕ್ತಪಡಿಸಿದಾಗ 'ರಾಕ್ಷಸಂ ಮುಟ್ಟಿದನೇ? ನಾನಲ್ತು, ದೈವಂ ಅಪರಾಧಿ, ಮೈಯನಲ್ಲದೇ, ಮನವನ್ನು ಮುಟ್ಟಿದನೇ?' ಎಂದು ಸೀತೆ ಪ್ರಶ್ನಿಸುತ್ತಾಳೆ. ಮನಃಶಾಸ್ತ್ರದಲ್ಲಿ ಶಾಲಿನಿಯ ಮನಸ್ಸಿನ ಗಿಲ್ಟ್ ಹೋಗಲಾಡಿಸಲು ಕುವೆಂಪುರವರ ಈ ಮೇಲಿನ ಸಾಲಿನಲ್ಲಿ ಅಡಗಿರುವ ತತ್ತ್ವವನ್ನೇ ಆಪ್ತ ಸಮಾಲೋಚನೆಯಲ್ಲಿ ಬಳಸುವುದು.

## ನಮ್ಮ ಮನೆಗಳಲ್ಲೂ ಆಗಬಹುದು!

ಮಕ್ಕಳ ಮೇಲಿನ ದೌರ್ಜನ್ಯ (abuse) ದ ಹಲವಾರು ವಿಧಗಳಲ್ಲಿ ಲೈಂಗಿಕ ದೌರ್ಜನ್ಯವೂ ಒಂದು. ಲಿಂಗ, ವಯಸ್ಸು, ಜಾತಿ, ಆರ್ಥಿಕ ಸ್ಥಿತಿ, ಹಳ್ಳಿ, ಪಟ್ಟಣ ಎಂಬ ಯಾವುದೇ ಭೇದಗಳಿಲ್ಲದೆ ಎಲ್ಲ ಮಕ್ಕಳ ಮೇಲೂ ಲೈಂಗಿಕ ದೌರ್ಜನ್ಯ ನಡೆಯಬಹುದು. ಸಾಮಾನ್ಯವಾಗಿ ಹತ್ತು ವರ್ಷಗಳ ಕೆಳಗಿನ ವಯಸ್ಸಿನಲ್ಲಾದರೆ, ಗಂಡು ಹೆಣ್ಣು ಮಕ್ಕಳಲ್ಲಿ ಸಮಾನವಾದ, ರಿಸ್ಕ್ ಇದ್ದರೆ, ಅದೇ ಹತ್ತು ವರ್ಷಗಳ ನಂತರದ ವಯಸ್ಸಿನಲ್ಲಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆಗುವ ಅಪಾಯ ಹೆಚ್ಚು. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಂತೂ ಒಂದು ಇಂತಹ ಕೇಸ್ ಬೆಳಕಿಗೆ ಬಂದರೆ, ಅದಕ್ಕೆ ಸರಿಯಾಗಿ ಬೆಳಕಿಗೆ ಬಾರದ ನೂರು ಕೇಸ್‌ಗಳಿರುತ್ತವೆ.

2018ರ ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋದ ದಾಖಲೆಗಳ ಪ್ರಕಾರ ಪ್ರತಿದಿನ ಸುಮಾರು 109 ಮಕ್ಕಳು ಭಾರತದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರು. ಆ ವರ್ಷದಲ್ಲಿ ಸುಮಾರು ಇಪ್ಪತ್ತೊಂದು ಸಾವಿರದಷ್ಟು ಮಕ್ಕಳ ಮೇಲೆ ನಡೆದ ಅತ್ಯಾಚಾರಗಳಾಗಿದ್ದವು.

## ಲೈಂಗಿಕ ದೌರ್ಜನ್ಯ

ಮಗುವನ್ನು, ಅವನಿಗೆ/ಳಿಗೆ ಅರ್ಥವಾಗದ, ಒಪ್ಪಿಗೆ ನೀಡಲಾರದ, ದೈಹಿಕ/ಮಾನಸಿಕ/ ಭಾವನಾತ್ಮಕವಾಗಿ ತಯಾರಿಲ್ಲದ, ಯಾವುದೇ ರೀತಿಯ ಲೈಂಗಿಕ ಚಟುವಟಿಕೆಗೆ ಉಪಯೋಗಿಸಿದರೆ/ಒತ್ತಾಯಿಸಿದರೆ, ಅದು ಲೈಂಗಿಕ ದೌರ್ಜನ್ಯವಾಗುತ್ತದೆ. ದೌರ್ಜನ್ಯ ಎಸಗುವ ವ್ಯಕ್ತಿ ಮಗುವಿಗಿಂತ ಹೆಚ್ಚಿನ ವಯಸ್ಸಿನ ಬಾಲಕ /ಬಾಲಕಿಯಿರಬಹುದು ಅಥವಾ ವಯಸ್ಕರಿರಬಹುದು. ಅಸಹಜ ಜಾಗಗಳಲ್ಲಿ ಮುಟ್ಟುವುದು, ಮಗುವಿನ ಮುಂದೆ ಜನನಾಂಗಗಳನ್ನು ಪ್ರದರ್ಶಿಸುವುದು, ಹಸ್ತಮೈಥುನ ಮಾಡುವುದು, ಸಂಭೋಗಕ್ಕೆ ಬಲಾತ್ಕರಿಸುವುದು, ಮಕ್ಕಳಿಗೆ ಅಶ್ಲೀಲಕರ ಚಿತ್ರ ತೋರಿಸುವುದೂ, ವೇಶ್ಯಾವಾಟಿಕೆಗೆ ಬಳಸುವುದೂ ಲೈಂಗಿಕ ದೌರ್ಜನ್ಯ.

## ಆಘಾತಕಾರಿ ಪರಿಣಾಮಗಳು

ಕಾರಣಗಳು, ಸಂದರ್ಭಗಳು ಏನೇ ಇರಲಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪರಿಣಾಮ ಅತ್ಯಂತ ನೈಜ ಮತ್ತು ಭಯಂಕರವಾದದ್ದು.

### ಲೈಂಗಿಕ ದೌರ್ಜನ್ಯವೆಸಗುವ ವ್ಯಕ್ತಿಗಳಾರು?

- ಬಹಳಷ್ಟು ಬಾರಿ, ಲೈಂಗಿಕ ದೌರ್ಜನ್ಯವೆಸಗುವ ವ್ಯಕ್ತಿಗಳು ಮಗುವನ್ನು ಬಲ್ಲವರಾಗಿರುತ್ತಾರೆ, ಆದರೆ ಕುಟುಂಬದವರಾಗಿರಲಿಕ್ಕಿಲ್ಲ. (ಕುಟುಂಬದ ಸ್ನೇಹಿತರು/ ಪಕ್ಕದ ಮನೆಯವರು)
- ಹತ್ತರಲ್ಲಿ ಮೂರು ಜನ ಮಗುವಿಗೆ ಕುಟುಂಬದವರಾಗಿರುತ್ತಾರೆ.
- ಹತ್ತರಲ್ಲಿ ಕೇವಲ ಒಬ್ಬ ವ್ಯಕ್ತಿ ಮಾತ್ರ ಮಗುವಿಗೆ ಅಪರಿಚಿತರಾಗಿರುತ್ತಾನೆ.
- ದೌರ್ಜನ್ಯ ಎಸಗುವವರು ಸಾಮಾನ್ಯವಾಗಿ ಗಂಡಸರಾಗಿರುತ್ತಾರೆ. ಕೇವಲ ಶೇಕಡ 10ರಷ್ಟು ವ್ಯಕ್ತಿಗಳು ಮಹಿಳೆಯರು.

ಫಿಂಕಲ್ ಹೋರ್ ಎನ್ನುವ ಮನಃಶಾಸ್ತ್ರಜ್ಞ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಗು/ವ್ಯಕ್ತಿಗೆ ಆಗುವಂಥ ಭಾವನಾತ್ಮಕ ಪರಿಣಾಮಗಳನ್ನು ವಿವರಿಸಿದ. ಇದಕ್ಕೆ 'Traumagenic effects' ಎಂದೂ ಕರೆದ. ಅವು ಈ ಕೆಳಗಿನಂತಿದೆ.

### ಆಘಾತಕಾರಿ ಲೈಂಗಿಕತೆ/ Traumatic Sexualization

ಲೈಂಗಿಕ ದೌರ್ಜನ್ಯದ ಅನುಭವದಿಂದ, ಮಗುವಿಗೆ ಲೈಂಗಿಕತೆಯ ಬಗ್ಗೆ ಕೆಟ್ಟ ಭಾವನೆಗಳು, ಭಾವನೆಗಳ ಇಲ್ಲದಿರುವಿಕೆ ಅಥವಾ sexual identity ಸಮಸ್ಯೆಗಳು ಉಂಟಾಗಬಹುದು. ವರ್ತನೆಗಳಿಗೆ ಬಂದರೆ, ಸಂಪೂರ್ಣವಾಗಿ ಲೈಂಗಿಕತೆಯಿಂದ ದೂರವಿರುವುದು ಅಥವಾ ಅತಿಯಾದ ಲೈಂಗಿಕತೆ, ಅಸಹಜವಾದ ಲೈಂಗಿಕ ವರ್ತನೆಗಳು ಕಾಣಿಸಬಹುದು.

### ಕಳಂಕೀಕರಣ/ Stigmatization

ಈ ಪ್ರಕ್ರಿಯೆಯಲ್ಲಿ ಮಕ್ಕಳು ತಪ್ಪಿತಸ್ಥ ಭಾವನೆ ಬೆಳೆಸಿಕೊಳ್ಳಬಹುದು. 'ನನ್ನ ಮೇಲೆ ದೌರ್ಜನ್ಯ ನಡೆದಿದೆ' ಎಂದು ತಂದೆತಾಯಿಗೆ ಮಗು ಹೇಳಿದಾಗ, ಅವರ ಮೊದಲ ಪ್ರತಿಕ್ರಿಯೆ, 'ಯಾರಿಗೂ ಹೇಳಬೇಡ' ಎಂಬುದು. ಇದರಿಂದ ಮಗು ಇಲ್ಲಿ ಮಾಡಬಾರದ, ನಡೆಯಬಾರದ ತಪ್ಪು ಆಗಿದೆ, ಇದಕ್ಕೆ ತಾನೇ ಕಾರಣವೇನೋ ಎಂದು ನಂಬಬಹುದು. ಇದಕ್ಕೆ Sgroi ಎಂಬ ಮನಶಾಸ್ತ್ರಜ್ಞ Damaged goods syndrome ಎಂದು ಕರೆದಿದ್ದಾನೆ.

### ದ್ರೋಹ/ Betrayal

ಲೈಂಗಿಕ ದೌರ್ಜನ್ಯ ನಡೆದಾಗ, ಆಗುವ ಮತ್ತೊಂದು ಮುಖ್ಯ ಬದಲಾವಣೆಯೆಂದರೆ, ಬೇರೆಯವರ ಮೇಲಿನ ವಿಶ್ವಾಸ ಕಳೆದುಕೊಳ್ಳುವುದು. ಸಂಬಂಧಿಕರು / ಕುಟುಂಬದವರು ದೌರ್ಜನ್ಯವೆಸಗಿದಾಗಲಂತೂ, ಯಾರು ತನ್ನನ್ನು ಕಷ್ಟದಿಂದ ಕಾಪಾಡಬೇಕಿತ್ತೋ, ಅವರೇ ನನ್ನ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂಬ ವಂಚನೆಯ ಭಾವನೆ. ಮುಂದೆ ಕೂಡ ಜೀವನಪೂರ್ತಿ ಇವರಿಗೆ ಬೇರೆಯವರ ಮೇಲೆ ವಿಶ್ವಾಸವಿಡಲು ಕಷ್ಟವಾಗಬಹುದು.

### ಶಕ್ತಿಹೀನತೆ/ Powerlessness

ಲೈಂಗಿಕ ದೌರ್ಜನ್ಯ ನಡೆದಾಗ, ಮಗುವಿಗೆ ಅಸಹಾಯಕತೆ ಕಾಡುತ್ತದೆ. ಈ ಮಗು ಮುಂದೆ ಬೆಳೆದಂತೆ, ಜೀವನದ ಹಲವಾರು ಸಂದರ್ಭಗಳಲ್ಲಿ, ಅಸಹಾಯಕತೆಗೆ ಒಳಗಾಗುತ್ತಾಳೆ/ನೆ. ಅದೇ ರೀತಿ, ಇನ್ನೊಂದು ಕಡೆ, ದೌರ್ಜನ್ಯವೆಸಗಿದ ವ್ಯಕ್ತಿಯ ಮೇಲಿನ ಸಿಟ್ಟಿನಿಂದ, ಎಲ್ಲರನ್ನೂ ತಾನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬ ಪ್ರಯತ್ನವೂ ನಡೆಯಬಹುದು.

ಜೀವನಪರ್ಯಂತ ಕಾಡುವ ತಪ್ಪಿತಸ್ಥ ಭಾವನೆ ಮತ್ತು ಅವಮಾನ

ಬಾಲ್ಯದಲ್ಲಿ ಲೈಂಗಿಕ ದೌರ್ಜನಕ್ಕೆ ಒಳಗಾದ ವ್ಯಕ್ತಿಗಳು ನಂತರದ ಜೀವನದಲ್ಲೂ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಾರೆ. ಮೇಲೆ ಹೇಳಿದ ಶಾಲಿನಿಯ ಕತೆಯೂ ಅಷ್ಟೇ. ಶಾಲಿನಿ ಅನುಭವಿಸುತ್ತಿರುವ ಈ ತಪ್ಪಿತಸ್ಥ ಭಾವನೆಯನ್ನು ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಈ ತಪ್ಪಿತಸ್ಥ ಭಾವನೆ (guilt) ಕೇವಲ ಒಂದು ಸ್ವಂತ ವರ್ತನೆಯ ಬಗ್ಗೆ ಅಲ್ಲ. ಅದು ಅವಳ ವ್ಯಕ್ತಿತ್ವವನ್ನೇ ಆವರಿಸಿಕೊಂಡಿದೆ. ಒಂದು ರೀತಿಯ ಅವಮಾನ (Shame) ಅವಳನ್ನು ಕಾಡುತ್ತಿದೆ. ಈ ಅವಮಾನದಿಂದಾಗಿ ಶಾಲಿನಿಯಂತವರಿಗೆ ಆತ್ಮವಿಶ್ವಾಸವೇ ಇಲ್ಲದಂತಾಗುತ್ತದೆ. ಒಳ್ಳೆಯ ಕೌಟುಂಬಿಕ ಬೆಂಬಲ, ಸಹೃದಯೀ ಸ್ನೇಹಿತರು, ಪ್ರೀತಿ ಮತ್ತು ಅನುಭೂತಿಯಿಂದ ಆಲಿಸುವ ಕಿವಿಗಳು ಮಕ್ಕಳಿಗೆ ಸಿಕ್ಕರೆ ಅವರ ಜೀವನ ಹಸನಾಗುತ್ತದೆ.

ಲೇಖಕಿ ಶಿವಮೊಗ್ಗದಲ್ಲಿ ಮನೋವೈದ್ಯೆ
ಸಂಪರ್ಕ: 08182274627